## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಬೆಂಗಳೂರು ಕೇಂದ್ರೀಯ ವಿಭಾಗ : ಬೆಂಗಳೂರು

ಕ್ರಸಂ: ಕರಾಸಾ/ಬೆಂ.ಕೇ.ವಿ/ಸಂ/ವಾಣಿಜ್ಯ/1623/2018-19 ದಿನಾಂಕ: 09-10-2018

### " ಇ-ಟೆಂಡರ್ ಪ್ರಕಟಣೆ ಸಂಖ್ಯೆ: 21/2018 "

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗದ ವ್ಯಾಪ್ತಿಯಲ್ಲಿರುವ ನೆಲಮಂಗಲ ವಾಹನ ನಿಲ್ದಾಣದ ವಾಣಿಜ್ಯ ಸಂಕೀರ್ಣದಲ್ಲಿ ಖಾಲಿಯಾಗಲಿರುವ ಮಳಿಗೆ ಸಂಖ್ಯೆ-1ನ್ನು ವಿಕಲಚೇತನರಿಗೆ ಮೀಸಲಿರಿಸಿ ಅದರಲ್ಲಿ ಮೆಡಿಕಲ್ ಸ್ಟೋರ್ ವ್ಯಾಪಾರ ಮಾಡಲು ಹಾಗೂ ಮಳಿಗೆ ಸಂಖ್ಯೆ:2, 4 ಮತ್ತು 7 ಗಳನ್ನು ಸಾಮಾನ್ಯ ವರ್ಗಕ್ಕೆ ಮೀಸಲಿರಿಸಿ ಅವುಗಳಲ್ಲಿ ಜನರಲ್ ಸ್ಟೋರ್ ವ್ಯಾಪಾರ ಮಾಡಲು ಐದು ವರ್ಷಗಳ ಅವಧಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ದಿನಾಂಕ: 30-10-2018 ರಂದು ಇ-ಟೆಂಡರ್ ನಿಗದಿಪಡಿಸಲಾಗಿದೆ. ಇ-ಟೆಂಡರ್ ಅರ್ಜಿಗಳನ್ನು / ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.Karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಳಿಗೆ ಸಂಖ್ಯೆ-1ಕ್ಕೆ ಚಾಲ್ತಿಯಲ್ಲಿರುವ ಸರ್ಕಾರಿ ಜಿಲ್ಲಾ ವೈದ್ಯಾಧಿಕಾರಿಗಳು ವಿತರಿಸಿರುವ ವಿಕಲಚೇತನರ ಪ್ರಮಾಣ ಪತ್ರವನ್ನು ಮತ್ತು ಔಷದಿ ನಿಯಂತ್ರಣ ಪ್ರಾಧಿಕಾರದಿಂದ ಔಷದಿಗಳನ್ನು ಮಾರಾಟ ಮಾಡು ಅನುಮತಿ ಪಡೆದಿರುವ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು. ಇ-ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಅರ್ಜಿ ಶುಲ್ಕವನ್ನು ಮತ್ತು ಇ.ಎಂ.ಡಿ ಮೊತ್ತವನ್ನು Divisional Controller, KSRTC, Bengaluru Central Division, Bengaluru ರವರ ಹೆಸರಿನಲ್ಲಿ ಡಿಡಿಯನ್ನು ಪಡೆದು, ಮೂಲ ಡಿಡಿಗಳನ್ನು ಹಾಗೂ ವಿಳಾಸದ ಬಗ್ಗೆ ಮೂಲ ದಾಖಲಾತಿಗಳನ್ನು ಟೆಂಡರ್ ತೆರೆಯುವ ಕೊನೆಯ ದಿನಾಂಕದೊಳಗೆ ಖುದ್ದಾಗಿ ಹಾಜರುಪಡಿಸುವುದು. ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ ಮೊತ್ತದ ಡಿಡಿ ಪ್ರತಿಗಳನ್ನು, ವಿಳಾಸದ ಮಾಹಿತಿ ಬಗ್ಗೆ ಹಾಗೂ ಸಂಬಂಧಪಟ್ಟ ದಾಖಲಾತಿಗಳ ಪ್ರತಿಗಳನ್ನು ಇ-ಪೋರ್ಟಲ್‌ನಲ್ಲಿ ದಿನಾಂಕ: 27-10-2018 ರಂದು 12:00 ಗಂಟೆಯವರೆಗೆ ಅಪ್‌ಲೋಡ್ ಮಾಡಬಹುದು. ದಿನಾಂಕ: 30-10-2018 ರಂದು (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ) ಇ-ಟೆಂಡರ್‌ನ್ನು ತೆರೆಯಲಾಗುವುದು. ಭಾಗವಹಿಸಿರುವವರು ಇ-ಟೆಂಡರ್ ತೆರೆಯುವ ಸಮಯದಲ್ಲಿ ಹಾಜರಿರುವುದು. ಮಳಿಗೆಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ಮಳಿಗೆಗಳ ವಿವರ (ವಾಣಿಜ್ಯ ಸಂಕೀರ್ಣ) | ವಿಸ್ತೀರ್ಣ (ಚ.ಅಡಿಗಳು) | ಮಾಸಿಕ ಶುಲ್ಕ | ಇ.ಎಂ.ಡಿ(ರೂ) ಸಂಸ್ಥೆಗೆ | ಇ.ಎಂ.ಡಿ(ರೂ) ಇ-ಪ್ರೊ. ಮೆಂಟ್‌ಗೆ | ಅರ್ಜಿ ಶುಲ್ಕ / ಜಿಎಸ್‌ಟಿ | ಖಾಲಿಯಾಗುವ ದಿನಾಂಕ | ಮೀಸಲಾತಿ |
|---|---|---|---|---|---|---|---|---|
| 1 | ಮಳಿಗೆ ಸಂಖ್ಯೆ-1 | 118 | 20497-00 | 61491-00 | 500-00 | 205+37 | 14-11-2018 | ವಿಕಲಚೇತನರು |
| 2 | ಮಳಿಗೆ ಸಂಖ್ಯೆ-2 | 118 | 27225-00 | 81675-00 | 500-00 | 272+49 | 01-01-2019 | ಸಾಮಾನ್ಯ ವರ್ಗ |
| 3 | ಮಳಿಗೆ ಸಂಖ್ಯೆ-4 | 118 | 29262-00 | 87786-00 | 500-00 | 293+53 | 01-01-2019 | ಸಾಮಾನ್ಯ ವರ್ಗ |
| 4 | ಮಳಿಗೆ ಸಂಖ್ಯೆ-7 | 118 | 29645-00 | 88935-00 | 500-00 | 297+54 | 01-01-2019 | ಸಾಮಾನ್ಯ ವರ್ಗ |

ಮೇಲಿನ ಮಳಿಗೆಗಳಿಗೆ ಇ-ಟೆಂಡರ್‌ನಲ್ಲಿ ಭಾಗವಹಿಸುವವರ ಪೈಕಿ ಯಶಸ್ವಿಯಾದವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಕೇಂದ್ರ/ರಾಜ್ಯ ಸರ್ಕಾರಗಳು ವಿಧಿಸುವ ತೆರಿಗೆಗಳು ಮತ್ತು ಷರತ್ತುಗಳಿಗೆ ಬದ್ಧರಾಗಿರಬೇಕು. ಸಲ್ಲಿಸಿರುವ ಅರ್ಜಿಗಳು ಕ್ರಮಬದ್ಧವಾಗಿಲ್ಲದ ಪಕ್ಷದಲ್ಲಿ ತಿರಸ್ಕರಿಸಲಾಗುವುದು. ಯಾವುದೇ ಕಾರಣ ನೀಡದೆ ಇ-ಟೆಂಡರ್‌ನ್ನು ಪುರಸ್ಕರಿಸುವ / ರದ್ದುಪಡಿಸುವ ಅಥವಾ ಮಾರ್ಪಾಡು ಮಾಡುವ ಹಕ್ಕನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 7760990029 & 7760990252 ಗಳನ್ನು ಸಂಪರ್ಕಿಸಲು ಕೋರಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ.
ಕ.ರಾ.ರ.ಸಾ.ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ.
ಶಾಂತಿನಗರ, ಬೆಂಗಳೂರು.